**ದಿನಾಂಕ 07.07.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಡಿ.ಜಿ. ವಕೀಲರಿಂದಃ**

1. 1 ನೇ ಪ್ರತಿವಾದಿ ವಿಜಯ ಕುಮಾರ್ ನನ್ನ ತಂದೆ, 2 ನೇ ಪ್ರತಿವಾದಿ ನನ್ನ ದೊಡ್ಡಪ್ಪ. ನನ್ನ ತಾಯಿಯ ಹೆಸರು ಜಗದಾಂಬ. 1 ನೇ ಪ್ರತಿವಾದಿ ನನ್ನ ತಂದೆಯ ಅಕ್ಕನ ಮಗಳು ನನ್ನ ತಾಯಿ ಈ ದಾವೆಯ 3 ನೇ ವಾದಿ ಎಂದರೆ ಸರಿ. ನನ್ನ ತಂದೆ ಪದವೀಧರರು. ನನ್ನ ತಂದೆ ಮೈಸೂರು, ಬೆಂಗಳೂರು, ತುಮಕೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಬೆಂಗಳೂರಿನಲ್ಲಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಂದೆ ಮೈಸೂರಿನಲ್ಲಿ ಆಟೋಮೋಟೀವ್ ಎಕ್ಸ್ ಎಲ್ ಮ್ಯಾನುಫ್ಯಾಕ್ಚರ್ ಇಂಡಸ್ಟ್ರೀಯಲ್ ನಲ್ಲಿ 1997 ರಿಂದ 2009 ರವರೆಗೂ ಪ್ರೊಡೆಕ್ಷನ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ, ತದನಂತರ ಅವರು ತುಮಕೂರಿಗೆ ಬಂದಿದ್ದರು ಎಂದರೆ ಸರಿ. ತುಮಕೂರಿನಲ್ಲಿ ಶ್ರೀದೇವಿ ಪಾಲಿಕೆಕ್ನಿಕ್ ಕಾಲೇಜಿನಲ್ಲಿ 2012-2017 ರವರೆಗೂ ಲೆಕ್ಚರರ್ ಆಗಿ ಕೆಲಸ ಮಾಡಿದ್ದರು ಎಂದರೆ ಸರಿ.
2. ನಾನು 1 ರಿಂದ 10 ನೇ ತರಗತಿಯವರೆಗೂ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದೇವೆ, ನನ್ನ ತಂಗಿ 4 ನೇ ತರಗತಿಯವರೆಗೂ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದಾಳೆ. ನಮ್ಮ ತಂದೆಯೇ ನಮ್ಮ ವಿದ್ಯಾಭ್ಯಾಸದ ಖರ್ಚನ್ನು ನೋಡಿಕೊಂಡಿದ್ದರು ಎಂದರೆ ಸರಿ. ನಮ್ಮ ವಿದ್ಯಾಭ್ಯಾಸದ ಸಲುವಾಗಿ ನನ್ನ ತಂದೆ ತುಮಕೂರಿಗೆ ಬಂದಿದ್ದಾರೆ ಎಂದರೆ ಸಾಕ್ಷಿಯು ಅವರನ್ನು ಕೆಲಸದಿಂದ ತೆಗೆದ ಕಾರಣ ಅವರು ತುಮಕೂರಿಗೆ ಬಂದಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆಯನ್ನು ಕೆಲಸದಿಂದ ತೆಗೆದಿರಲಿಲ್ಲ, ನಮ್ಮನ್ನು ಓದಿಸುವ ಸಲುವಾಗಿ ಅವರು ತುಮಕೂರಿಗೆ ಬಂದಿದ್ದರು ಎಂದರೆ ಸರಿಯಲ್ಲ. ತುಮಕೂರಿನಲ್ಲಿ ನನ್ನ ತಂದೆಗೆ ಒಂದು ಸೈಟು ಇದೆ ಎಂದರೆ ಸರಿ. ನನ್ನ ತಾಯಿ ಆರೋಗ್ಯವಾಗಿ ಇದ್ದಾರೆ, ನನ್ನ ತಾಯಿಯನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಿಸಬಹುದು ಎಂದರೆ ಸರಿ.
3. ನನ್ನ ತಂದೆ ಪ್ರೊಡೆಕ್ಷನ್ ಇಂಜಿನಿಯರ್ ಆದ ಕಾರಣ ಅವರಿಗೆ ಒಳ್ಳೆಯ ಸಂಬಳ ಬರುತ್ತಿತ್ತು ಎಂದರೆ ಸಾಕ್ಷಿಯು ಅವರಿಗೆ ಹೆಚ್ಚಿನ ಸಂಬಳ ಬರುತ್ತಿರಲಿಲ್ಲ, ನಮ್ಮ ವಿದ್ಯಾಭ್ಯಾಸ ಮತ್ತು ನಮ್ಮ ಮನೆ ನಿಭಾಯಿಸುವಷ್ಟು ಮಾತ್ರ ಸಂಬಳ ಬರುತ್ತಿತ್ತು ಎಂದು ನುಡಿಯುತ್ತಾರೆ ತುಮಕೂರಿನಲ್ಲಿ ನನ್ನ ತಂದೆಗೆ ರೂ. 60-70,000/- ರೂಪಾಯಿಗಳ ಸಂಬಳ ಬರುತ್ತಿತ್ತು ಎಂದರೆ ಸರಿ. ಮೈಸೂರಿನಲ್ಲಿ ರೂ. 60-70,000/- ಸಂಬಳ ಬರುತ್ತಿತ್ತು ಎಂದರೆ ಸರಿಯಲ್ಲ.

ನಾನು out source ನಲ್ಲಿ ಸಿವಿಲ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ, ನನಗೆ ರೂ. 15,000/- ಸಂಬಳ ಬರುತ್ತದೆ. ನನಗೆ ಹೆಚ್ಚಿನ ಸಂಬಳ ಬರುತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಂದೆ ತುಮಕೂರಿಗೆ ಬಂದ ನಂತರ ಅವರಿಗೆ ಕಿಡ್ನಿ ಸಮಸ್ಯೆ ಪ್ರಾರಂಭವಾಗಿಯಿತು ಎಂದರೆ ಸಾಕ್ಷಿಯು ಅವರು ಮೈಸೂರಿನಲ್ಲಿ ಇದ್ದಾಗಲೇ ಅವರಿಕೆ ಕಿಡ್ನಿ ಸಮಸ್ಯೆ ಇತ್ತು ಅಂದಿನಿಂದಲೂ ನಾವೇ ಅವರನ್ನು ನೋಡಿಕೊಳ್ಳುತ್ತಿದ್ದೇವೆ. ನಾನು 2 ನೇ ತರಗತಿಯಲ್ಲಿ ಇದ್ದಾಗ ನನ್ನ ತಂದೆಗೆ ಕಿಡ್ನಿ ಸಮಸ್ಯೆ ಬಂದಿದೆ. ಸುಮಾರು 10 ವರ್ಷದಿಂದ ಕಿಡ್ನಿ ಸಮಸ್ಯೆ ಇದೆಯೇ ಎಂದರೆ ಸರಿಯಲ್ಲ, ಸುಮಾರು 20 ವರ್ಷಗಳಿಂದಲೂ ಇದೆ. ಅವರಿಗೆ ಕಿಡ್ನಿ ಸಮಸ್ಯೆ ಇದ್ದ ಕಾರಣ ನಾವೆಲ್ಲರೂ ನಮ್ಮ ತಂದೆಯನ್ನು ದೂರವಿಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಾಯಿ ನೋಡಿಕೊಂಡಿದ್ದೇವೆ.

5. ನನ್ನ ತಂದೆಯು ಸ್ವಂತ ದುಡಿಮೆಯಿಂದ ದಾವಾ ಐಟಂ ನಂ.3 ಮತ್ತು 4 ರ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಸ್ವತ್ತುಗಳ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪಿಟ್ಲಾರಿಯಲ್ಲಿ ನಮಗೆ ಸ್ವಂತ ಮನೆ ಇಲ್ಲ, ಆದರೆ ಜಮೀನು ಇದೆ. ಸದರಿ ಜಮೀನುಗಳು ಒಣಭೂಮಿಯಾಗಿದ್ದು, ಅಲ್ಲಿ ಯಾವುದೇ ಬೆಳೆ ಇಲ್ಲ ಎಂದರೆ ಸಾಕ್ಷಿಯು ಅಲ್ಲಿ ಕಬ್ಬು ಮತ್ತು ಕಡ್ಲೆಕಾಯಿ ಬೆಳೆಗಳು ಬೆಳೆಯಲಾಗುತ್ತದೆ ಎಂದು ಹೇಳುತ್ತಾರೆ. ದಾವಾ ಐಟಂ ನಂ.1 ರ ಜಮೀನು ಬೀಳುಬಿದ್ದ ಜಮೀನು ಎಂದು ನಿ.ಪಿ.2 ರ ಪಹಣಿಯಲ್ಲಿ ಬಂದಿದೆ ಎಂದರೆ ಸಾಕ್ಷಿಯು ಈ ಮುಂಚೆ ಬೆಳೆಯನ್ನು ಬೆಳೆಯುತ್ತಿದ್ದರು ಎಂದು ನುಡಿಯುತ್ತಾರೆ. ಹಿಂದೆಯೂ ಕುಷ್ಕಿ ಜಮೀನು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಚಾನಲ್ ನೀರು ವಾಣಿವಿಲಾಸದಿಂದ ಬರುತ್ತದೆ, ಅದರಲ್ಲಿ ಬೆಳೆ ತೆಗೆಯಲಾಗುತ್ತಿದ್ದು, ಬೋರ್ ವೆಲ್ ಸಹ ಇದೆ ಎಂದು ನುಡಿಯುತ್ತಾರೆ. ಪಹಣಿಯಲ್ಲಿ ನೀರಿನ ಮೂಲದಲ್ಲಿ ಬೋರ್ ಮತ್ತು ಚಾನಲ್ ನ್ನು ತೋರಿಸಿಲ್ಲ ಆದಕಾರಣ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಹಣಿಯಲ್ಲಿ ಇಲ್ಲದೇ ಇರುವ ಕಾರಣ ಬೋರ್ ವೆಲ್ ವ್ಯವಸ್ಥೆ ಮತ್ತು ನೀರಿನ ಚಾನಲ್ ಇಲ್ಲ ಎಂದರೆ ಸರಿಯಲ್ಲ.

6. ನಿ.ಪಿ.1 ವಿಭಾಗ ಪತ್ರವನ್ನು ನಾನು ಹಾಜರುಪಡಿಸಿದ್ದು, ಅದು ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರ ನಡುವೆಯಾದಂತಹ ವಿಭಾಗ ಪತ್ರವಾಗಿದ್ದು, ಅದರಲ್ಲೂ ಸಹ ಕುಷ್ಕಿ ಜಮೀನು ಇದ್ದು, ನೀರಿನ ಸೌಲಭ್ಯ ತೋರಿಸಿಲ್ಲ ಎಂದರೆ ಸರಿಯಲ್ಲ, ಅದರಲ್ಲಿ ಚಾನಲ್ ನೀರಿನಿಂದ

ಕಬ್ಬು ಮತ್ತು ಕಡ್ಲೆಕಾಯಿ ಬೆಳೆಗಳನ್ನು ಬೆಳೆಯುತ್ತಿದ್ದೆವು. ಕಬ್ಬನ್ನು ಹಿರಿಯೂರು ಫ್ಯಾಕ್ಟರಿಗೆ ಮಾರಾಟ ಮಾಡುತ್ತಿದ್ದರು. ಹಿರಿಯೂರು ಕಬ್ಬಿನ ಫ್ಯಾಕ್ಟರಿಯಲ್ಲಿ ಕಬ್ಬನ್ನು ಮಾರಾಟ ಮಾಡಿದ್ದಲ್ಲಿ ಅವರಿಗೆ ಒಂದು ಪಾಸ್ ಪುಸ್ತಕವನ್ನು ನೀಡಲಾಗುತ್ತಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿದೆಯಾ ಎಂದು ಕೇಳಿದ್ದಕ್ಕೆ, ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವೆ ಹಾಕಲು ನಾನು ಮತ್ತು ನನ್ನ ತಾಯಿ ಮಾಹಿತಿಯನ್ನು ಕೊಟ್ಟಿರುತ್ತೇವೆ.

7. ಬೆಳೆ ಬೆಳೆಯುತ್ತಿದ್ದ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುವ ಬಗ್ಗೆ ನಿಖರವಾಗಿ ನನಗೆ ಗೊತ್ತಿಲ್ಲ ನಿಜವಾಗಲು ಬೆಳೆ ಬೆಳೆಯುತ್ತಿದ್ದಲ್ಲಿ, ನಾನು ತಿಳಿಸುತ್ತಿದ್ದೆ, ಕೇಸಿಗಾಗಿ ನಾನು ಬೆಳೆ ತೆಗೆಯುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಊರಲ್ಲಿ ವಾಸ ಇಲ್ಲದೇ ಇದ್ದರೂ ಸಹ ಹೇಳಿಕೆಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮೈಸೂರಿನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಜಮೀನಿನ ಕಡೆ ಯಾರು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ.

8. ದಾವಾ ಐಟಂ ನಂ. 2 ರ ಆಸ್ತಿಯು ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಬಂದಿದ್ದು, ಅದಕ್ಕೂ ನನ್ನ ದೊಡ್ಡಪ್ಪ ತಕರಾರು ಮಾಡುತ್ತಿದ್ದಾರೆ ಎಂದರೆ ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪ ತಕರಾರು ಮಾಡಿಲ್ಲ ಬದಲಾಗಿ ಅವರೇ ಖಾತೆ ಪಹಣಿ ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**